

## ಪುಟಿದೇಳಬಲ್ಲ ಶಕ್ತಿ ಬೇಕು!

ನಾವು ನಿರ್ಮಿಸುವ ನಗರಗಳಿಗೆ ಪರಿಸರದಲ್ಲಿನ ವ್ಯತ್ಯಾಸಗಳನ್ನು ತಡೆದುಕೊಳ್ಳುವ ಗುಣ–ಶಕ್ತಿಗಳಿರಬೇಕು ಎಂಬುದು ತಜ್ಞರ ಅಭಿಮತ. ವಿಚಿತ್ರವೆಂದರೆ, ವಾಯುಗುಣ ಬದಲಾವಣೆಗೆ ಹೆಚ್ಚಿನ ಕೊಡುಗೆ ನೀಡುವುದು ನಗರಗಳೇ! ಪ್ರತಿ ಬಾರಿ ಮಳೆ ಬಂದಾಗ ನಮ್ಮ ನಗರಗಳ ಸ್ಥಿತಿ ಏನಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಕಾಣುತ್ತಿದ್ದೇವೆ. ಸಣ್ಣ ಮಳೆ ಬಂದರೂ ನಗರಗಳಲ್ಲಿ ಪ್ರವಾಹ! ತ್ವರಿತಗತಿಯಲ್ಲಿ ಕೆಡುತ್ತಿರುವ ವಾಯುಗುಣವು ಅತಿ ತೀಕ್ಷ್ಣ ಪ್ರಾಕೃತಿಕ ಘಟನೆಗಳಿಗೆ ಕಾರಣವಾಗುತ್ತಿದೆ. ಧಾರಾಕಾರ ಮಳೆ ಬಂದಾಗಲಂತೂ ನಗರ ಜೀವನ ನರಕವೆನಿಸಿಬಿಡುತ್ತದೆ. ಆಸ್ತಿನಾಶ, ಮುಳುಗಡೆ, ಹೊಲಸು, ಕೆಸರು, ರಾಡಿನೀರು, ವಿದ್ಯುತ್ ಕಡಿತ, ರಸ್ತೆ–ಸೇತುವೆ ಕುಸಿತಗಳು, ಸಾಮಾಜಿಕ ಆರ್ಥಿಕ ನಾಶಕ್ಕೆ ನಾಂದಿ ಬರೆಯುತ್ತವೆ. ಪೌರಾಡಳಿತ ಇಲಾಖೆಯು ದಿಕ್ಕೆಟ್ಟು ಕೂರುತ್ತದೆ. ಸಹಾಯವಾಣಿಗಳಿಗೇ ಸಹಾಯ ಮಾಡುವವರು ಬೇಕಾಗುತ್ತಾರೆ.

ಭಾರೀ ಮಳೆಯಿಂದ ಲಾಭಗಳೂ ಇವೆ. ಹಸಿರು ಪ್ರದೇಶ, ಕೆರೆ–ಹೊಂಡ, ತರಿ ಭೂಮಿಗಳು ನೈಸರ್ಗಿಕ ಮಳೆ ಕೊಯಿಲಿನ ತಾಣಗಳಾಗುತ್ತವೆ. ಭಾರೀ ಪ್ರಮಾಣದ (ಬೃಹತ್) ನೀರಿನ ಶೇಖರಣೆ ಸಾಧ್ಯವಾಗುತ್ತದೆ. ಕೆರೆ– ಹೊಂಡಗಳು ಹೂಳಿನಿಂದ ಮುಕ್ತವಾಗಿದ್ದರೆ ಹೆಚ್ಚಿನ ನೀರಿನ ಸಂಗ್ರಹಣೆಗೆ ಅನುಕೂಲವಾಗುತ್ತದೆ. ನಗರಗಳ ಕೆರೆಗಳನ್ನು ಸರಣಿ ಕೆರೆಗಳನ್ನಾಗಿ ಜೋಡಿಸಿದಲ್ಲಿ ಅಪಾರ ನೀರಿನ ಸಂಗ್ರಹವಾಗುತ್ತದೆಯಲ್ಲದೆ, ಸುತ್ತಲಿನ ಅಂತರ್ಜಲ ಮಟ್ಟವೂ ಏರುತ್ತದೆ. ವಾಸದ ಜನರ ನೀರಿನ ಅವಶ್ಯಕತೆಯನ್ನು ಪೂರೈಸಲು ನೂರಾರು ಮೈಲಿ ದೂರದ ನದಿಗಳಿಂದ, ಕಾಲುವೆಗಳಿಂದ ನೀರು ತರುವ ಪ್ರಮೇಯವೇ ಬರುವುದಿಲ್ಲ. ಸರಬರಾಜಿಗೆ ಬೇಕಾಗುವ ವಿದ್ಯುತ್ತು, ಸೋರಿಕೆ, ನೌಕರವರ್ಗ, ಎಲ್ಲವೂ ಖರ್ಚಿನ ಬಾಬತ್ತೆ. ಸ್ಥಳೀಯ ಸಂಪನ್ಮೂಲಗಳಿಂದ ನೀರು ಪಡೆಯುವುದು ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ.

ವಾಯುಗುಣ ಬದಲಾವಣೆಯಿಂದ ನಗರಗಳ ತಾಪಮಾನ ಹೆಚ್ಚುತ್ತದೆ. ಅದನ್ನು ನಿಯಂತ್ರಣದಲ್ಲಿಡಲು ನಗರದಾದ್ಯಂತ ಹಸಿರು ಪ್ರದೇಶ, ಮೈದಾನ, ಮರಗಳ ನೆಡುತೋಪು, ನೈಸರ್ಗಿಕವಾಗಿ ಬೆಳೆದು ನಿಂತ ಕಿರು ಅರಣ್ಯಗಳು, ನೀರಿನ ತಾಣಗಳು ಬೇಕೇ ಬೇಕು. ನಗರಗಳಲ್ಲಿ ನಿರ್ಮಿಸಲಾಗುವ ಮನೆಗಳು ನಗರ ನಿಸರ್ಗಗುಣಕ್ಕೆ ಹೊಂದಿಕೊಳ್ಳುವಂತಿರಬೇಕು. ಇದನ್ನು ‘ಪ್ಯಾಸಿವ್ ಆರ್ಕಿಟೆಕ್ಚರ್’ ಎನ್ನುತ್ತೇವೆ. ಸಾಂಪ್ರದಾಯಿಕ ಕಟ್ಟಡ ನಿರ್ಮಾಣವಾಗುತ್ತಿದ್ದ ಕಾಲದಲ್ಲಿ ಮೇಲೆ ಸಜ್ಜ ಇರುತ್ತಿತ್ತು. ಅದು ಮನೆಯೊಳಗೆ ನುಗ್ಗುವ ಸೂರ್ಯನ ಬೆಳಕು ಮತ್ತು ಶಾಖ ಎರಡನ್ನೂ ಕಡಿತಗೊಳಿಸುತ್ತಿತ್ತು. ಮಳೆಗಾಲದಲ್ಲಿ ನೀರು ಮನೆಯ ಒಳಗೆ ಬರುತ್ತಿರಲಿಲ್ಲ. ಮನೆಗಳ ನಡುವೆ ಸಾಕಷ್ಟು ಖಾಲಿ ಜಾಗವಿರುತ್ತಿತ್ತು. ಈಗಲೂ ಸಹ ಕಟ್ಟಡ ಕಟ್ಟುವಾಗ ಕನಿಷ್ಠ ಮೂರು ಅಡಿಗಳ ಸೆಟ್‌ಬ್ಯಾಕ್ ಇರಬೇಕೆಂಬ ನಿಯಮವಿದೆ. ನಗರಗಳಲ್ಲಿ ಕಟ್ಟಲಾದ ಕಟ್ಟಡಗಳನ್ನು ಗಮನಿಸಿದರೆ ನಿಯಮದ ಪಾಲನೆ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬುದು ತಿಳಿಯುತ್ತದೆ. ದಾಖಲೆಗಳ ಪ್ರಕಾರ, ನಿಯಮವನ್ನು ಪಾಲಿಸುವವರ ಸಂಖ್ಯೆ ಶೇ. 4ರಷ್ಟೂ ಇಲ್ಲ.

ನಗರಗಳಲ್ಲಿ ಉಷ್ಣಾಂಶ ಹೆಚ್ಚಿದಷ್ಟೂ ಸ್ಥಿತಿವಂತ ಜನರು ಏರ್ ಕಂಡೀಶನರ್‌ಗಳ (ಹವಾನಿಯಂತ್ರಕಗಳ) ಮೊರೆ ಹೋಗುತ್ತಾರೆ. ಇದು ವಾತಾವರಣದ ಗಾಳಿಯನ್ನು ಮಲಿನಗೊಳಿಸುತ್ತದೆ. ಹವಾನಿಯಂತ್ರಕ ಕೆಲಸ ಮಾಡಲು ಹೆಚ್ಚಿನ ವಿದ್ಯುತ್ ಬೇಕಾಗುತ್ತದೆ. ಅದರಿಂದ ವಿದ್ಯುತ್ ಉತ್ಪಾದನಾವಲಯದ ಮೇಲೆ ಭಾರೀ ಒತ್ತಡ ಬೀಳುತ್ತದೆ. ನಗರದ ಉಷ್ಣಾಂಶವು 28 ಡಿಗ್ರಿ ಸೆಲ್ಸಿಯಸ್ ದಾಟುತ್ತಿದ್ದಂತೆ ಜನ ಫ್ಯಾನು, ಎಸಿ, ಏರ್‌ಕೂಲರ್‌ಗಳನ್ನು ಚಾಲೂ ಮಾಡುತ್ತಾರೆ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳ ಗಾಜಿನ ಬೃಹತ್ ಕಿಟಕಿಗಳು, ಅದರ ಡಬಲ್ ಇನ್ಸುಲೇಶನ್‌ಗಳು ವಾತಾವರಣಕ್ಕೆ ಹೆಚ್ಚಿನ ಉಷ್ಣತೆ ಹೊಮ್ಮಿಸುತ್ತವೆ.

ನಮ್ಮ ಹಿಂದಿನವರು ನಗರಗಳನ್ನು ಭೌಗೋಳಿಕ ಅನುಕೂಲಗಳಿಗೆ ತಕ್ಕಂತೆ ನಿರ್ಮಿಸುತ್ತಿದ್ದರು. ಉದಾಹರಣೆಗೆ, ರಾಜಸ್ಥಾನದ ಜೈಸಲ್ಮೇರ್‌ನ ಮನೆಗಳು ಸೂರ್ಯನ ಬಿಸಿಲಿನ ತಾಪವನ್ನು



### ಭಾರತದ ‘ಸ್ಮಾರ್ಟ್’ ಕಥೆ

‘ನ್ಯಾಷನಲ್ ಸ್ಮಾರ್ಟ್ ಸಿಟಿ ಮಿಷನ್’ ಯೋಜನೆಗೆ ತಗಲುವ ಮೊತ್ತ

**2,03,979**

ಕೋಟಿ ರೂಪಾಯಿ

‘ನ್ಯಾಷನಲ್ ಸ್ಮಾರ್ಟ್ ಸಿಟಿ ಮಿಷನ್’ ಯೋಜನೆಯ ಅಡಿಯಲ್ಲಿ ಸ್ಮಾರ್ಟ್ ಸಿಟಿ ಆಗುತ್ತಿರುವ ನಗರಗಳು

**110**

ಯೋಜನೆಯ ಪ್ರಾರಂಭ ವರ್ಷ

**2015**

ಯೋಜನೆಯ ಮುಕ್ತಾಯದ ವರ್ಷ

**2020**

(ಅವಧಿ ಮುಕ್ತಾಯಗೊಂಡಿದ್ದರೂ, ಸಂಪನ್ಮೂಲಗಳ ಕೊರತೆಯಿಂದ ‘ಸ್ಮಾರ್ಟ್ ಸಿಟಿ’ ಕಾರ್ಯಕ್ರಮ ಕುಂಟುತ್ತಾ ಮುಂದುವರೆದೇ ಇದೆ.)